ವೈದೇಹಿ, ಮೈಸೂರು

◆ ವೈದ್ಯರು ಕೊಡುವ ಭರವಸೆ, ಜ್ಯೋತಿಷಿ ಕೊಡುವ ಭರವಸೆ; ಇವುಗಳಲ್ಲಿ ಯಾವುದು ಉತ್ತಮ ರಾಂಜಿ?



ಜ್ಯೋತಿಷಿಯದು ಭರವಸೆಯಲ್ಲ, ಕಲ್ಪನೆಗಳ ಮೂಟೆ.

ಕೆ.ವಿ. ಶಿವಕುಮಾರ್, ಮೈಸೂರು

◆ ಇಲ್ಲೊಬ್ಬಳು ನನ್ನನ್ನು ನೋಡಿದಾಕ್ಷಣ 'ಮಾತು, ಒಂದು ಮಾತು' ಅನ್ನುತ್ತಾಳಲ್ಲಾ....?

ಬುದ್ಧಿವಂತೆ. ಆಗೊಂದು ಮಾತು, ಈಗೊಂದು ಮಾತಲ್ಲ, ಒಂದೇ ಮಾತಿರಲಿ ಎಂದು ಎಚ್ಚರಿಸುತ್ತಿದ್ದಾಳೆ.

ಚೆನ್ನವೀರ ನಾಲ್ವಾಡ, ಚಿಕ್ಕೇನಕೊಪ್ಪ

◆ ಚುನಾವಣೆಯ ವೆಚ್ಚವನ್ನು ಕಡಿಮೆ ಮಾಡುವುದು ಹೇಗೆ?



'ನೋಟು ಕೊಟ್ಟವನಿಗೆ ಓಟು ಕೊಡಲ್ಲ' ಎಂದು ನಿರ್ಧರಿಸಿದರೆ ಸಾಕು.

ಕೆ.ಹೆಚ್. ರಾಮಕೃಷ್ಣರೆಡ್ಡಿ, ಬೆಂಗಳೂರು

◆ ರಾಜಕಾರಣಿಗಳು ಏಕೆ ಬಣ್ಣಬಣ್ಣದ ಬಟ್ಟೆ ಹಾಕಿಕೊಳ್ಳುವುದಿಲ್ಲ?

ಸ್ವಯಂ ಬಣ್ಣ ಬದಲಾಯಿಸುವವರಿಗೆ ಬಣ್ಣದ ಬಟ್ಟೆ ಮ್ಯಾಚ್ ಆಗುವುದಿಲ್ಲವಂತೆ.

ಎಚ್.ಕೆ. ವಿಜಯಕುಮಾರ್, ರಾಯಚೂರು

◆ ದೇಗುಲದ ತೀರ್ಥಕ್ಕೂ ಬಾರ್‌ನ ತೀರ್ಥಕ್ಕೂ ಏನು ವ್ಯತ್ಯಾಸ?

ದೇಗುಲದ ತೀರ್ಥಕ್ಕೆ ಮೊದಲು ಮಂಗಳಾರತಿ; ಬಾರ್‌ನ ತೀರ್ಥದ ನಂತರ ಮಂಗಳಾರತಿ.

ಮುಕುಂದ ಹೆರಕಲ್ಲ, ಕಲಬುರ್ಗಿ

◆ ಕೆಲವರು ದೇವಾಲಯಗಳಲ್ಲಿ ಬಲದಿಂದ ಎಡಕ್ಕೆ ಉಲ್ಟಾ ಪ್ರದಕ್ಷಿಣೆ ಹಾಕುವುದರ ಗುಟ್ಟೇನು?

ತಮ್ಮದು ಎಡವಟ್ಟಿಗೇ ಬೆಂಬಲ ಎಂದು ಸೂಚಿಸಲು.

ಶಿವಸ್ವಾಮಿ ನೇನೇಕಟ್ಟೆ, ಬೆಂಗಳೂರು

◆ ಸ್ವರ್ಗದಲ್ಲೇ ಸತಿಪತಿಯರ ಜೋಡಿ ನಿರ್ಧರಿಸುವ ಬ್ರಹ್ಮ ಬಹುಪಾಲು ವಿಷಮ ಜೋಡಿಗಳನ್ನೇ ಸೃಷ್ಟಿಸುವುದೇಕೆ?

ಜೋಡಿ ವಿಷಮವಾಗಿ ಇರದಿದ್ದರೆ ಕಥೆ ರೋಚಕವಾಗದು. ಬ್ರಹ್ಮ ಜಗದ ಮೊದಲ ಥ್ರಿಲ್ಲರ್ ರೈಟರ್.

ಎಂ.ಜಿ. ನೇಹವರ್ಷಿಣಿ, ಬಳ್ಳಾರಿ

◆ ಅಮ್ಮ ಎಂಬ ಪದಕ್ಕೂ, ಪತ್ನಿ ಎಂಬ ಪದಕ್ಕೂ ಏನು ವ್ಯತ್ಯಾಸ?

ಅಮ್ಮ ಕರ್ತೃ ಪದ; ಪತ್ನಿ ಕರ್ಮ ಪದ.

ಬಿದರಹಳ್ಳಿ ಚನ್ನವೀರಪ್ಪ, ಹಿರೇಹಡಗಲಿ

◆ ಪೆದ್ದು ಹುಡುಗಿಯರು ಒಳ್ಳೆಯ ಹೆಂಡತಿಯರಾಗ್ತಾರಂತೆ. ಹೌದಾ?

ಊಹೂಂ. ಒಳ್ಳೆಯ ಹೆಂಡತಿಯರೇ ಗಂಡನ ಬುದ್ಧಿಮಟ್ಟಕ್ಕೆ ಇಳಿಯುವ ಸಲುವಾಗಿ ಪೆದ್ದಿಯರಂತೆ ಆಡುವರಷ್ಟೆ.

ವಿ. ಹಮೀದ್, ವಿಟ್ಲ

◆ ಗಿಡ್ಡ ಹೆಂಡತಿ ಲೇಸು ಎಂದು ಸರ್ವಜ್ಞ ನುಡಿಯಲು ಕಾರಣವೇನು?

ಬಹಳ ಎತ್ತರ ಇದ್ದರೆ ತಾಳಿ ಕಟ್ಟಲು ಏಣಿ ಹಾಕಿಕೊಳ್ಳಬೇಕಾದೀತಲ್ಲ.

ಮಲ್ಲಿಕಾರ್ಜುನ ಹ. ಬಗಲಿ, ಜತ್ತ

◆ ಒಡಹುಟ್ಟಿದವರನ್ನು ನಂಬದವರು ದೇವರನ್ನು ನಂಬುತ್ತಾರೇಕೆ?

ಏಕೆಂದರೆ ಕಲ್ಪನೆ ನೀಡುವ ಸುಖವನ್ನು ವಾಸ್ತವ ನೀಡುವುದಿಲ್ಲ.

ನಾರಾಯಣ, ಕೋಣೆ

◆ ಗ್ರಹಕ್ಕೂ ಗೃಹಕ್ಕೂ ಏನು ವ್ಯತ್ಯಾಸ?

ನಿಯಮಾನುಸಾರ ಚಲಿಸಿದರೆ ಗ್ರಹ; ಸಂಯಮಾನುಸಾರ ಚಲಿಸಿದರೆ ಗೃಹ.

## ಬಹುಮಾನಿತ ಪ್ರಶ್ನೆ

ಬಿ. ಚಂದ್ರೇಗೌಡ, ಬೆಂಗಳೂರು

◆ ಗಣಿತ ಸೂತ್ರಕ್ಕೂ ಸಂಸಾರ ಸೂತ್ರಕ್ಕೂ ಏನು ವ್ಯತ್ಯಾಸ?

ಗಣಿತಸೂತ್ರದಲ್ಲಿ ಎಕ್ಸ್ = 20 ಸಹ ಇರಬಹುದು; ಸಂಸಾರಸೂತ್ರದಲ್ಲಿ ಒಂದೇ ಒಂದು ಎಕ್ಸ್ ಕಂಡುಬಂದರೂ ಪ್ರಮಾದ.

ಫಾಲನೇತ್ರ ಸಜ್ಜನ, ಶಿರಸಿ

◆ ಅಂಗಾಂಗ ಕಸಿಯಂತೆ ಆತ್ಮ ಕಸಿ ಏಕಿಲ್ಲ?

ಕೈಗೆ ಸಿಗದಲ್ಲ. ಕಸಿಯಲು ಆಗುವುದನ್ನು ಮಾತ್ರ ಕಸಿ ಮಾಡಲು ಆಗುವುದಂತೆ.

ನರಸಿಂಹ ಪೈ, ಹೊನ್ನಾವರ

◆ ಮನಸ್ಸು ಕನ್ನಡಿಯಂತೆ ಇರಬೇಕು. ಏಕೆ?

ತನ್ನ ಮುಂದೆ ಬಂದ ಎಲ್ಲ ವಸ್ತು, ವಿಷಯಗಳನ್ನೂ ಸ್ಪಷ್ಟವಾಗಿ ನೋಡಲು.

ಅಮರಯ್ಯ ಪತ್ರಿಪಠ, ಸುರಪುರ

◆ ಗುರುಶಿಷ್ಯರ ಸಂಬಂಧ ಹೇಗಿರಬೇಕು?



ಪ್ರಶ್ನಾರ್ಹವಾಗಿ.

ಹಾಡ್ಯ ಬ. ಜಯಾನಂದ, ಮೈಸೂರು

◆ ನಮ್ಮ ಸುತ್ತ ಶಕುನಿ, ದುರ್ಯೋಧನ, ದುಶ್ಯಾಸನರೇ ಇದ್ದಾರೆ. ಏಕಲವ್ಯ, ಅಭಿಮನ್ಯುಗಳಂತಹವರು ಏಕಿಲ್ಲ?

ಇದ್ದಾರೆ. ಮಕ್ಕಳ ಫೀಸ್‌ಗಾಗಿ ಹೆಬ್ಬೆಟ್ಟೊತ್ತಿ ಆಸ್ತಿ ಕಳೆದ ಏಕLoveಯರು ಚಕ್ರಬಡ್ಡಿಯ ಸುಳಿಯಲ್ಲೇ ಸಿಲುಕಿರುವ ಅಭಿಮನ್ಯುಗಳು.

ವಿ. ಹೇಮಂತಕುಮಾರ್, ಬೆಂಗಳೂರು

◆ ವಿಗ್ ಹಾಕುವುದಕ್ಕೂ ಪೆಗ್ ಹಾಕುವುದಕ್ಕೂ ವ್ಯತ್ಯಾಸವೇನು ಸಾರ್?

ಕೂದಲು ಹಾಳಾಗಿದ್ದರೆ ವಿಗ್; ತಲೆ ಹಾಳಾಗಿದ್ದರೆ ಪೆಗ್.

■ ರಾಮ್